ಸ್ಲಮ್ ಜಗತ್ತು ಫೆಬ್ರವರಿ 2021 ರಲ್ಲಿ ಪ್ರಕಟವಾಯಿತು

# ಶೌಚಗುಂಡಿಗಳಲ್ಲಿ ಸಾವುಗಳು ವಿಪತ್ತುಗಳಲ್ಲ

ಕಲ್ಬುರ್ಗಿ ನಗರವು ರಾಜ್ಯದಲ್ಲಿ ಅತ್ಯಂತ ಹೆಚ್ಚು ಮಾನವ ಜನಸಂದಣಿಯಿಂದ ಕೂಡಿದ ನಗರವಾಗಿದೆ. ಇಲ್ಲಿ ಪ್ರತಿ ಚದರ ಕಿ.ಮೀಗೆ 8,824 ಜನ ವಾಸ ಮಾಡುತ್ತಿರುವುದಾಗಿ ದಾಖಲಾಗಿದೆ. ಈ ನಗರವು ಅತೀ ವೇಗವಾಗಿ ಬೆಳೆಯುತ್ತಿರುವ ನಗರವಾಗಿದ್ದು, ಅಲ್ಲಿ ಮೂಲಭೂತ ಸೌಕರ್ಯಗಳಿಗಾಗಿ ಅತೀ ಹೆಚ್ಚು ಹಣವನ್ನು ವ್ಯಹಿಸಲಾಗುತ್ತಿದೆ. ಅಮೃತ್ ಯೋಜನೆಯಲ್ಲಿ 230 ಕಿ.ಮೀ ಉದ್ದದ ಒಳಚರಂಡಿ ಹಾಗೂ ಅದಕ್ಕೆ 8,000 ಮ್ಯಾನ್‌ಹೋಲ್‌ಗಳನ್ನು ಕರ್ನಾಟಕ ನಗರ ನೀರು ಹಾಗೂ ಒಳಚರಂಡಿ ಮಂಡಳಿಯಿಂದ ನಿರ್ಮಿಸಲಾಗುತ್ತಿದ್ದು, ಅದು ಮುಗಿಯುವ ಹಂತದಲ್ಲಿದೆ. ಜೊತೆಗೆ ವಿಶ್ವ ಬ್ಯಾಂಕ್‌ನ ಉತ್ತರ ಕರ್ನಾಟಕ ನಗರ ಮೂಲಸೌಕರ್ಯ ನಿರ್ಮಾಣ ಯೋಜನೆಯ ಅಡಿಯಲ್ಲಿ ಕರ್ನಾಟಕ ನಗರ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಣಕಾಸು ಸಂಸ್ಥೆಯಿಂದ ಬಹಳಷ್ಟು ಹಣವನ್ನು ಒಳಚರಂಡಿ ನಿರ್ಮಿಸಲು ವೆಚ್ಚ ಮಾಡಲಾಗುತ್ತಿದೆ. ಕಲ್ಬುರ್ಗಿ ಮಹಾನಗರ ಪಾಲಿಕೆಯ ಪ್ರಕಾರ, ನಗರದಲ್ಲಿ 700 ಕಿ.ಮೀ ಉದ್ದದ ಒಳಚರಂಡಿ ವ್ಯವಸ್ಥೆ ನಿರ್ಮಿಸಲಾಗಿದೆ ಎಂದು ಹೇಳಲಾಗುತ್ತದೆ. ಸ್ವಚ್ಛ ಭಾರತ ಮಿಷಿನ್‌ನಂತೆಯೇ ಇಲ್ಲೂ ಕೂಡಾ ಅವೈಜ್ಞಾನಿಕ ವಿಧಾನದಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಲಾಗಿರುವುದು ಕಂಡು ಬಂದಿದೆ. ಈ ಯೋಜನೆಗಳ ಅಡಿಯಲ್ಲಿ ಅತೀ ಹೆಚ್ಚು ಹಣವನ್ನು ಖರ್ಚು ಮಾಡಲಾಗಿದ್ದರೂ, ಅದನ್ನು ನಿರ್ವಹಿಸುವ ವ್ಯವಸ್ಥೆಯನ್ನು ಸರಿಯಾಗಿ ಜಾರಿಗೆ ತಂದಿಲ್ಲ. ಮತ್ತೊಂದು ಮಾತಿನಲ್ಲಿ ಹೇಳಬೇಕಾದರೆ ಈ ಯೋಜನೆಗಳನ್ನು ರೂಪಿಸಿ ಜಾರಿ ಮಾಡಿದ್ದವರಿಗೆ ಅದನ್ನು ಯಾರು ಹೇಗೆ ಸ್ವಚ್ಛಗೊಳಿಸುತ್ತಾರೆಂಬ ಮುಂದಾಲೋಚನೆ ಇದ್ದಂತಿಲ್ಲ. ನಗರದ ಒಳಚರಂಡಿ ವ್ಯವಸ್ಥೆಯನ್ನು ನಿರ್ವಹಿಸುವ ಜವಾಬ್ದಾರಿ ರಾಜ್ಯ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ಬಳಿಯೇ ಇದೆ. ಆದರೇ ಅವರ ಬಳಿ ಇರುವುದು ಇವುಗಳನ್ನು ಸ್ವಚ್ಛಗೊಳಿಸಲು 3 ಸರ್ಕಿಂಗ್ ಮತ್ತು ಜೆಟ್ಟಿಂಗ್ ಮಿಷಿನ್ಸ್ ಹಾಗೂ ಒಂದು ಹೂಳು ತೆಗೆಯುವ ಯಂತ್ರ ಮಾತ್ರ.

ಈ ಕಾರಣಗಳಿಂದ ಕಾರ್ಮಿಕರಿಂದ ಮ್ಯಾನ್‌ಹೋಲ್‌ಗಳನ್ನು ಸ್ವಚ್ಛಗೊಳಿಸುವುದು ಅತ್ಯಧಿಕವಾಗಿದೆ. ಈ ಮ್ಯಾನ್‌ಹೋಲ್ ಸ್ವಚ್ಛತಾ ಕಾರ್ಯವನ್ನು ಮಂಡಳಿ ಅಥವಾ ಗುತ್ತಿಗೆದಾರರ ಮೂಲಕ ನಿರ್ವಹಿಸುವಾಗ ಕಾರ್ಮಿಕರನ್ನು ಕಟ್ಟಿಕೊಂಡಿರುವ ಮ್ಯಾನ್‌ಹೋಲ್‌ಗೆ ಇಳಿಸಿ ಸ್ವಚ್ಛಗೊಳಿಸುವುದು ಸಾಮಾನ್ಯವಾಗಿದೆ. ಸಫಾಯಿ ಕರ್ಮಚಾರಿ ಸಮುದಾಯದೊಂದಿಗೆ ಕೆಲಸ ಮಾಡುವ ಕಾರ್ಯಕರ್ತರ ಪ್ರಕಾರ ನಗರದಲ್ಲಿ 800 ರಿಂದ 1000 ಜನ ಕಾರ್ಮಿಕರು ಮಲ ಹೊರುವ ಪದ್ಧತಿಯ ಹಲವು ತರಗಳಲ್ಲಿ ಕೆಲಸ ಮಾಡುತ್ತಿರುವುದಾಗಿ ಹೇಳುತ್ತಿದ್ದಾರೆ. ಇದು ತರಾಫೈಲ್, ಇಂದ್ರಾನಗರ, ಗಾಜೀಪುರ್, ಸಂತ್ರಾಸ್ವಾಡಿ, ಮೆಹಬೂಬ್‌ನಗರ್, ಆಜಾದ್‌ಪುರ್ ರೋಡ್, ಟಿಪ್ಪು ಚೌಕ್, ಪಂಚಶೀಲ ನಗರ ಹಾಗೂ ಉಮರ್ ಕಾಲೋನಿ ಪ್ರದೇಶಗಳಲ್ಲಿ ಅತೀ ಹೆಚ್ಚಾಗಿದೆ. ಈ ಕಾರ್ಮಿಕರಲ್ಲಿ ಉತ್ತರ ಭಾರತದ ವಾಲ್ಮೀಕಿ(ಭಂಗಿ) ಸಮುದಾಯ ಹಾಗೂ ಮುಸ್ಲಿಂ ಸಮುದಾಯಗಳು ಸಮ ಸಂಖ್ಯೆಯಲ್ಲಿದ್ದಾರೆ. ಇವರು ಈ ಸಮುದಾಯಗಳಿಗೆ ಸೇರಿದವರಾಗಿರುವುದರಿಂದಲೇ

ಒಳಚರಂಡಿ ವ್ಯವಸ್ಥೆ ನಿರ್ಮಿಸಲು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ ಸರ್ಕಾರವು ಅದನ್ನು ನಿರ್ವಹಿಸಲು ಅತ್ಯಗತ್ಯವಾದ ಯಂತ್ರಗಳನ್ನು ಕೊಂಡುಕೊಳ್ಳಲು ವಿಫಲವಾಗಿದೆ ಎಂದು ತೋರುತ್ತದೆ. ಈ ಯಂತ್ರಗಳನ್ನು ಮೊದಲೇ ಕೊಂಡುಕೊಂಡಿದ್ದರೇ, ಅಮೂಲ್ಯ ಪ್ರಾಣಗಳನ್ನು ಮತ್ತೆ ಮತ್ತೆ ಕಳೆದುಕೊಳುತ್ತಿರಲಿಲ್ಲ.

ನಗರದಲ್ಲಿ 800 ರಿಂದ 1000 ಜನ ಈ ವೃತ್ತಿಯಲ್ಲಿ ತೊಡಗಿರುವುದಾಗಿ ಅಂದಾಜಿಸಲಾಗಿದ್ದರೂ ಮಲ ಹೊರುವ ಪದ್ಧತಿ ನಿಷೇಧ, ಹಾಗೂ ಪುನರ್ವಸತಿ ಕಾಯ್ದೆ 2013 ಮತ್ತು ನಿಯಮಗಳ ಪ್ರಕಾರ 2018ರಲ್ಲಿ ಮಹಾನಗರ ಪಾಲಿಕೆ ನಡೆಸಿದ ಸಮೀಕ್ಷೆಯಲ್ಲಿ 243 ಜನರನ್ನು ಮಾತ್ರ ಈ ವೃತ್ತಿಯಲ್ಲಿರುವ ಕಾರ್ಮಿಕರೆಂದು ಗುರುತಿಸಲಾಯಿತು. ಅವರು ಮಾಡಿದ ಸ್ವಯಂ ಘೋಷಣೆಯ ಒಂದು ದಿನದ ಕ್ಯಾಂಪ್‌ನಲ್ಲಿ ಇಷ್ಟು ಜನರು ಮಾತ್ರ ತಾವು ಈ ವೃತ್ತಿಯಲ್ಲಿ ನಿರತರಾಗಿರುವುದಾಗಿ ಸ್ವಯಂ ಘೋಷಣೆ ಮಾಡಿದ್ದಾರೆಂದು ಪಾಲಿಕೆ ಹೇಳುತ್ತದೆ. ಆದರೇ ಇದು ಕಾಯ್ದೆಯ ಉಲ್ಲಂಘನೆಯು ಆಗಿದ್ದು, ಈ ನ್ಯೂನ್ಯತೆಯಿಂದ ನೂರಾರು ಕಾರ್ಮಿಕರು ಪ್ರಾಣಕ್ಕೆ ಅಪಾಯಕಾರಿ ವೃತ್ತಿಯನ್ನು ಮುಂದುವರೆಸುವಂತೆ ಮಾಡಿ, ಅವರ ಪುನರ್ವಸತಿಗೆ ಯಾವುದೇ ವ್ಯವಸ್ಥೆಯನ್ನು ಸರ್ಕಾರದಿಂದ ಮಾಡುವುದನ್ನು ತಡೆಯಲಾಗಿದೆ. ಈ ಕಾರ್ಮಿಕರಲ್ಲಿ 25–30 ಜನ ಉಮರ್ ಕಾಲೋನಿಯಲ್ಲಿ ವಾಸ ಮಾಡುತ್ತಿದ್ದಾರೆ. ಅವರ ಕುಟುಂಬಗಳು ಹಲವು ತಲೆಮಾರುಗಳಿಂದ ಇದೇ ವೃತ್ತಿಯನ್ನು ಮಾಡಿಕೊಂಡು ಬಂದಿದೆ. ಇಲ್ಲಿ ವಾಸ ಮಾಡುವ ಬುರಾನ್‌ಶೇಖ್ 55 ವರ್ಷ ಅವರು ಕರ್ನಾಟಕ ನೀರು ಹಾಗೂ ಒಳಚರಂಡಿ ಮಂಡಳಿಗೆ 1982ರಲ್ಲಿ 270 ರೂಪಾಯಿ ಸಂಬಳಕ್ಕೆ ಕೆಲಸಕ್ಕೆ ಸೇರಿದವರು. ಅವರು ಒಳಚರಂಡಿ ಕಟ್ಟಿಕೊಂಡಾಗ ಬಂಬೂ ಕಡ್ಡಿಗಳಿಂದ ಸ್ವಚ್ಛಗೊಳಿಸುತ್ತಿದ್ದರು. ಇವರಿಗೆ ಮೊದಲು ಇವರ ತಂದೆಯು ಇದೇ ಕೆಲಸವನ್ನು ಮಾಡುತ್ತಿದ್ದರು. ಆದರೆ ಇವರು ಪುನರ್ವಸತಿ ಯೋಜನೆಯಲ್ಲಿ ನೋಂದಾಯಿಸಿಕೊಳ್ಳಲು ಅನರ್ಹರು ಎಂದು ಪಾಲಿಕೆ ಹೇಳುತ್ತದೆ. ಅದಕ್ಕೆ ಕಾರಣವಾಗಿ ಇವರು ನೀರು ಹಾಗೂ ಒಳಚರಂಡಿ ಮಂಡಳಿಯಲ್ಲಿ ಒಳಚರಂಡಿ ಸ್ವಚ್ಛತಾ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಲಾಗಿದೆ. ಇವರ ಕುಟುಂಬದ ಹಲವು ಸದಸ್ಯರು ಈ ಒಳಚರಂಡಿ ಸ್ವಚ್ಛತಾ ಕೆಲಸದಲ್ಲಿ ನಿರತರಾಗಿದ್ದಾರೆ. ಇವರ 2 ಮಕ್ಕಳು ಹಾಗೂ ಮೊಮ್ಮಗ ಕರ್ನಾಟಕ ನೀರು ಹಾಗೂ ಒಳಚರಂಡಿ ಮಂಡಳಿಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದಾರೆ.

ಐದು ವರ್ಷಗಳ ಹಿಂದೆ ಬುರಾನ್‌ಶೇಖ್ ಅವರ ಮಗ ಮೆಹಬೂಬ್‌ಶೇಖ್‌ರನ್ನ ಇದೇ ವಿಷಾ ಅನಿಲಕ್ಕೆ ಕಳೆದುಕೊಂಡರು. ಮೆಹಬೂಬ್‌ಶೇಖ್ ರವರು ಮ್ಯಾನ್‌ಹೋಲನ್ನು ಮುಚ್ಚಲ ತೆಗೆಯಬೇಕಾದರೆ ಎದೆಯಲ್ಲಿ ಸ್ವಲ್ಪ ಕಸಿವಿಸಿಯಾಗುತ್ತಿದೆ ಎಂದು ಹೇಳಿದರು. ಆಗ ಮಂಡಳಿಯ ಕಾಂಟ್ರೆಕ್ಟರು ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವ ಬದಲು ಮನೆಗೆ ಕಳುಹಿಸಿದರು. ಸೈಕಲ್ ತುಳಿಯುತ್ತಾ ಉಮರ್ ಕಾಲೋನಿಯಲ್ಲಿನ ತಮ್ಮ ಮನೆ ತಲುಪಿದ ಮೆಹಬೂಬ್‌ಶೇಖ್ ಕುಸಿದು ಬಿದ್ದು ಪ್ರಾಣ ಬಿಟ್ಟರು. ಮಂಡಳಿಯವರು ಅವರ ಕುಟುಂಬಕ್ಕೆ ಯಾವುದೇ ಪರಿಹಾರವನ್ನು ನೀಡಲಿಲ್ಲ ಮತ್ತು ಅವರ ಮನೆಯವರು ಯಾರಿಗೂ ಅನುಕಂಪದ ಆಧಾರದಲ್ಲಿ ಉದ್ಯೋಗವನ್ನು ಕೊಡಲಿಲ್ಲ.

ಜನವರಿ 28ರಂದು ಬೆಳಿಗ್ಗೆ ಬುರಾನ್‌ಶೇಖ್‌ನ ಮಗ ಲಾಲ್ ಅಹಮದ್(36) ರವರಿಗೆ ಕಾಂಟ್ರೆಕ್ಟರ್ ಫೋನ್ ಹಾಯಿಸಿ, ಕೈಲಾಸ್‌ನಗರ ಹಾಗೂ ಮಹಾಲಕ್ಷ್ಮಿ ಲೇಔಟ್ ಮಧ್ಯದ ರಸ್ತೆ ಜಂಕ್ಷನ್‌ನಲ್ಲಿ ಒಳಚರಂಡಿ

ಕಟ್ಟಿಕೊಂಡು ನೀರು ರಸ್ತೆಯಲ್ಲಿ ಹರಿಯುತ್ತಿರುವುದಾಗಿ ಕರೆದರು. ಅಲ್ಲಿ ಒಳಚರಂಡಿ ಕಟ್ಟಿಕೊಳ್ಳುವುದು ಸಾಮಾನ್ಯವಾಗಿದ್ದು, ಈಗ ಕಟ್ಟಿಕೊಂಡಿದ್ದ ಸಂದರ್ಭದಲ್ಲಿ ಹಲವು ತಿಂಗಳುಗಳಿಂದ ರಸ್ತೆಯಲ್ಲಿ ಹರಿಯುತ್ತಿದೆ ಎಂದು ನಿವಾಸಿಗಳಿಂದ ಮಂಡಳಿಗೆ ಪದೇ ಪದೇ ದೂರು ದಾಖಲಾಗಿದ್ದವು. ಲಾಲ್ ಅಹಮದ್ ರಶೀದ್‌ಶೇಖ್(ಬುರಾನ್ ಶೇಖ್‌ರ ಮೊಮ್ಮಗ) ರಾಜ್ ಅಹಮದ್(ಬುರಾನ್‌ಶೇಖ್‌ನ ಕೊನೆಯ ಮಗ) ತಸ್ಲೀಂ ಶೇಖ್ ಹಾಗೂ ಉಮರ್ ಕಾಲೋನಿಯ ಇನ್ನೆರಡು ನಿವಾಸಿಗಳು ಸೇರಿದಂತೆ ಸಾಮಾನ್ಯವಾಗಿ ಒಟ್ಟಿಗೆ ಕೆಲಸ ಮಾಡುವವರು. ಅವರು ಒಳಚರಂಡಿ ಕಟ್ಟಿಕೊಂಡಿದ್ದ ಜಾಗಕ್ಕೆ ಕೂಡಲೇ ತಲುಪಿದ್ದರು. ಘಟನೆಯನ್ನು ನೋಡಿದವರು ಹೇಳುವಂತೆ ಸಮಸ್ಯೆಯನ್ನು ಸರಿಪಡಿಸಲು ಸಕ್ಕಿಂಗ್ ಅಂಡ್ ಜೆಟ್ಟಿಂಗ್ ಯಂತ್ರಗಳನ್ನು ಕರೆಯಲಾಗಿ ಅವುಗಳಿಂದ ಚರಂಡಿ ಕಟ್ಟಿಕೊಂಡಿರುವುದನ್ನು ಸರಿ ಮಾಡಲಾಗಿರಲಿಲ್ಲ, ಕಾರಣ ಹೂಳು ಹಾಗೂ ಕಲ್ಲಿನ ಚೂರುಗಳು ಒಳಚರಂಡಿ ಕಟ್ಟಿಕೊಳ್ಳಲು ಕಾರಣವಾಗಿತ್ತು. ಆಗ ಹೂಳು ತೆಗೆಯುವ ಯಂತ್ರವನ್ನು ಕರೆದಾಗ ಇಡೀ ನಗರಕ್ಕೆ ಅದು ಒಂದೇ ಯಂತ್ರ ಎನ್ನುವ ಕಾರಣಕ್ಕೆ ಸ್ಥಳಕ್ಕೆ ತಲುಪಲು ಸಾಧ್ಯವಾಗಿಲ್ಲ. ಆ ಏಕೈಕ ಯಂತ್ರ ಬಾರದೇ ಹೋದಾಗ, ಕಾಂಟ್ರೆಕ್ಟರು ಕಾರ್ಮಿಕರನ್ನು ಮ್ಯಾನ್‌ಹೋಲ್ ಒಳಗೆ ಇಳಿದು ಬಂಬೂ ಕಡ್ಡಿಗಳ ಮೂಲಕ ಸ್ವಚ್ಛಗೊಳಿಸಲು ಹೇಳಿದರು. ಕಾರ್ಮಿಕರು ಇದನ್ನು ನಿರಾಕರಿಸಿದಾಗ ಅವರು ಈ ಕೆಲಸವನ್ನು ಮಾಡಿದರೆ ಅವರಿಗೆ ಬಾಕಿ ಇರುವ 3–4 ತಿಂಗಳುಗಳ ಸಂಬಳವನ್ನು ನೀಡುವುದಾಗಿ ಕಾಂಟ್ರೆಕ್ಟರ್ ಮಾತು ಕೊಟ್ಟು ಕೆಲಸ ಮಾಡಲು ಹೇಳಿದರು. ಇದೆಲ್ಲವೂ ನಡೆಯುತ್ತಿದ್ದಾಗ ಖಾಸಗೀ ಕಂಪನಿಯ ಸೂಪರ್‌ವೈಸರ್, ಮಾಲೀಕರು ಹಾಗೂ ಜಲ ಹಾಗೂ ಒಳಚರಂಡಿ ಮಂಡಳಿಯ ಅಧಿಕಾರಿಗಳು ಸತತವಾಗಿ ಸಂಪರ್ಕದಲ್ಲಿದ್ದರು.

3–4 ತಿಂಗಳುಗಳಿಂದ ಸಂಬಳಗಳಿಲ್ಲದೇ ಬಹಳ ಕಷ್ಟದಲ್ಲಿದ್ದ ಇವರಿಗೆ ಆ ಸಂಬಳ ಅಗತ್ಯವಾಗಿತ್ತು. ಅಲ್ಲಿನ 20 ಅಡಿ ಆಳದ ಮ್ಯಾನ್‌ಹೋಲ್‌ಗೆ ಮೊದಲು ರಶೀದ್ ಶೇಖ್ ಇಳಿದು ಅಲ್ಲಿ ಕಟ್ಟಿಕೊಂಡಿದ್ದನ್ನ ಬಂಬೂ ಕಡ್ಡಿಯಿಂದ ಸರಿ ಪಡಿಸಲು ಪ್ರಯತ್ನ ಮಾಡಿದರು. ಹೂಳು ಹಾಗೂ ಕಲ್ಲುಗಳು ಎತ್ತಿದ ಕೂಡಲೇ ಒಳ ಚರಂಡಿ ಕೊಳವೆಯಲ್ಲಿದ್ದ ವಿಷ ಅನಿಲ ರಶೀದ್ ಶೇಖ್ ಮುಖಕ್ಕೆ ಅಪ್ಪಳಿಸಿ ಅವರು ಪ್ರಜ್ಞೆ ತಪ್ಪಲು ಪ್ರಾರಂಭವಾಯಿತು. ಅವರು ಮತ್ತೆ ಮೇಲೆ ಹತ್ತಿ ಬರಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಆಗ ಲಾಲ್ ಅಹಮದ್ ರಶೀದರನ್ನು ಮೇಲಕ್ಕೆತ್ತಲು ಒಳಗೆ ಇಳಿದರು. ವಿಷ ಅನಿಲ ಗಾಢವಾಗಿದ್ದ ಕಾರಣ ಅವರು ಕೂಡಾ ಪ್ರಜ್ಞೆ ತಪ್ಪಿ ಮ್ಯಾನ್‌ಹೋಲ್ ಒಳಗೇ ಕುಸಿದು ಬಿದ್ದರು. ರಾಜ ಅಹಮ್ಮದ್ ಇವರಿಬ್ಬರನ್ನು ಕಾಪಾಡಲು ಹೋಗಿ ಅವರು ಒಳಗೆ ಬಿದ್ದರು. ಹೊರಗಿದ್ದ ಮೂರು ಕಾರ್ಮಿಕರು ಹಾಗೂ ಗುತ್ತಿಗೆದಾರರು ಒಂದು ಹಗ್ಗದಿಂದ ರಾಜ ಅಹಮ್ಮದ್ ಸ್ವಲ್ಪ ಮೇಲೆ ಇದ್ದ ಕಾರಣಕ್ಕೆ ಅವರನ್ನು ಮೇಲೆ ಎಳೆದುಕೊಂಡರು. ಆದರೇ ಲಾಲ್ ಅಹಮ್ಮದ್, ರಶೀದ್‌ಶೇಖ್ ಮ್ಯಾನ್‌ಹೋಲ್‌ನ ಕೆಳ ಭಾಗದಲ್ಲಿದ್ದುದರಿಂದ ಅವರನ್ನು ಮೇಲಕ್ಕೆತ್ತುವ ಪ್ರಯತ್ನಗಳು ವಿಫಲವಾಯಿತು. ನಂತರ ಜೆಸಿಬಿ ಕರೆಸಿ ಮ್ಯಾನ್‌ಹೋಲನ್ನು ಹೊಡೆದು ಅವರನ್ನು ಹೊರಗೆ ತರಲಾಯಿತು. ಲಾಲ್ ಅಹಮ್ಮದ್ ಹಾಗೂ ರಶೀದ್‌ಶೇಖ್ ಇಬ್ಬರು ಸ್ಥಳದಲ್ಲೇ ಪ್ರಾಣ ಬಿಟ್ಟಿದ್ದು ರಾಜ ಅಹಮ್ಮದ್‌ರನ್ನು ಗಂಭೀರ ಸ್ಥಿತಿಯಲ್ಲಿ ಜಿಲ್ಲಾಸ್ಪತ್ರೆಗೆ ಕೊಂಡೊಯ್ಯಲಾಯಿತು.

ಈ ತರದ ಸಾವುಗಳ ಸಂದರ್ಭಗಳಲ್ಲಿ ಸಾಮಾನ್ಯವಾಗಿ ಏನಾಗುತ್ತಿತ್ತೋ ಇಲ್ಲೂ ಅದೇ ಆಗಿದೆ. ಕೆಲವು ಸಂಘಟನೆಗಳು ರಸ್ತೆ ತಡೆ ಹೋರಾಟ ಮಾಡುವವರೆಗೂ ಪೊಲೀಸರು ಎಫ್‌ಐಆರ್ ದಾಖಲಿಸಿಕೊಳ್ಳಲಿಲ್ಲ. ಹೋರಾಟದ ನಂತರ ದಾಖಲಿಸಲಾದ ಎಫ್‌ಐಆರ್‌ನಲ್ಲಿ (ಐಪಿಸಿ 304 ಭಾಗ 2 ನರ ಹತ್ಯೆಗೆ ಕಾರಣ)

ಅಡಿಯಲ್ಲಿ ದಾಖಲಿಸುವ ಬದಲಾಗಿ (304/ಎ ನಿರ್ಲಕ್ಷ್ಯೆ) ಅಡಿಯಲ್ಲಿ ಪ್ರಕರಣ ದಾಖಲಿಸಲಾಯಿತು. ಅದರಲ್ಲಿ ಅಪರಾಧಿಗಳ ಪಟ್ಟಿಯಲ್ಲಿ ನೀರು ಹಾಗೂ ಒಳಚರಂಡಿ ಮಂಡಳಿ ಅಧಿಕಾರಿಗಳ ಸಮೇತ ಎಲ್ಲಾ ಅಧಿಕಾರಿಗಳ ಹೆಸರುಗಳಲ್ಲಿ ಅಕ್ಷರಗಳು ತಪ್ಪಾಗಿ ನಮೂದಿಸಲಾಗಿತ್ತು. ಮಂಡಳಿ ಅಧಿಕಾರಿಗಳು ಬಾಧಿತ ಕುಟುಂಬದ ಜೊತೆಗೆ ಮಾತುಕತೆ ನಡೆಸಿ 5 ಲಕ್ಷ ರೂಪಾಯಿಗಳನ್ನು ನೀಡಿದರು. ಇದು ಸುಪ್ರೀಂ ಕೋರ್ಟ್‌ನ ಸಫಾಯಿ ಕರ್ಮಚಾರಿ ಆಂದೋಲನ್ ವರ್ಸಸ್ ಯೂನಿಯನ್ ಆಫ್ ಇಂಡಿಯಾ ಮೊಕದಮ್ಮೆಯಲ್ಲಿನ ಆದೇಶದ ಸ್ಪಷ್ಟ ಉಲ್ಲಂಘನೆಯಾಗಿದೆ.

ಕಲಬುರ್ಗಿ ಮಹಾನಗರ ಪಾಲಿಕೆ ಹಾಗೂ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ಅಧಿಕಾರಿಗಳು ಇದನ್ನು ಒಂದು ವಿಪತ್ತು ಎಂದು ಬಿಂಬಿಸಿ ಹೇಳಿಕೆಗಳನ್ನು ನೀಡಿದರು. ಅದರಂತೆ ಕಾರ್ಮಿಕರು ಆಯಾ ತಪ್ಪಿ ಮ್ಯಾನ್‌ಹೋಲ್‌ಗೆ ಬಿದ್ದರು ಎಂಬುದಾಗಿತ್ತು. ಆದರೆ ಸ್ಥಳದಲ್ಲಿ ತೆಗೆಯಲಾದ ಫೋಟೋಗಳಲ್ಲಿ ಕಾರ್ಮಿಕರು ನಿಕ್ಕರ್‌ಗಳನ್ನು ಮಾತ್ರ ಧರಿಸಿದ್ದು ಕಂಡು ಬಂತು. ಅಂದರೇ ಮ್ಯಾನ್‌ಹೋಲನ್ನು ಯಂತ್ರದಿಂದ ಸ್ವಚ್ಛಗೊಳಿಸುವಾಗ ಅವರು ಯಾಕೆ ಬಟ್ಟೆಯನ್ನು ಕಳಚಬೇಕಿತ್ತು? 3 ಜನರು ಒಂದೇ ಬಾರಿಗೆ ಮ್ಯಾನ್‌ಹೋಲ್‌ಗೆ ಜಾರಿ ಬೀಳಲು ಹೇಗೆ ಸಾಧ್ಯ? ನೀರು ಹಾಗೂ ಒಳಚರಂಡಿ ಮಂಡಳಿಯ ಕಲಬುರ್ಗಿ ವಿಭಾಗದ ಮುಖ್ಯ ಅಭಿಯಂತರರು ಈ ಜನರ ಬಗ್ಗೆ ನಿಮಗೆ ಗೊತ್ತಿಲ್ಲವೇ ಎಂದು ಹೇಳುತ್ತಾ, ಅವರಿಗೆ ಮದ್ಯ ಬಿಡಿಸುವ ಹಾಗೂ ಆತ್ಮ ಸಮಾಲೋಚನೆ ಬೇಕಿದೆ ಎಂದು ಸಲಹೆ ನೀಡಿದರು. ಉಮರ್ ಕಾಲೋನಿಯ ಇದೇ ವೃತ್ತಿಯಲ್ಲಿರುವ ಹಲವು ಕಾರ್ಮಿಕರ ಜೊತೆ ಮಾತನಾಡಿದಾಗ ಅವರನ್ನು ಮ್ಯಾನ್‌ಹೋಲ್‌ಗಳಿಗೆ ಇಳಿಸಿ ಸ್ವಚ್ಛಗೊಳಿಸಲು ಹೇಳುವುದು ಸಾಮಾನ್ಯ ವಿಷಯವೆಂದು, ತಾವು ಬಸವೇಶ್ವರ ಆಸ್ಪತ್ರೆ ಒಳಗೊಂಡಂತೆ ಹಲವು ಪ್ರದೇಶಗಳಲ್ಲಿ ಮ್ಯಾನ್‌ಹೋಲ್ ಒಳಗೆ ಇಳಿದು ಸ್ವಚ್ಛಗೊಳಿಸಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೇ ಕರ್ನಾಟಕ ಸರ್ಕಾರ ಮಾತ್ರ ರಾಜ್ಯದಲ್ಲಿ ಮಲ ಹೊರುವ ಕಾರ್ಮಿಕರು ಇಲ್ಲ ಎಂದು ಪದೇ ಪದೇ ಹೇಳುತ್ತದೆ.